

# ಕಾಡುವ ಕಾಡು ಹಣ್ಣುಗಳು



ಅದೆಷ್ಟು ಬಗೆಯ ಹಣ್ಣಿನ ಮರ- ಗಿಡಗಳನ್ನು ಮಲೆನಾಡಿನ ಬೆಟ್ಟ- ಗುಡ್ಡಗಳ ಸಾಲು ತನ್ನಲ್ಲಿ ಹುದುಗಿಸಿಕೊಂಡಿದೆ! ಬೇಸಿಗೆ, ಮಳೆಗಾಲ, ಚಳಿಗಾಲ.. ಹೀಗೆ ಸರ್ವಕಾಲದಲ್ಲೂ ಹಸಿರೆಲೆಗಳ ನಡುವೆ ಬಣ್ಣವರಳಿಸಿ ನಗುವ ರುಚಿಕರ ಹಣ್ಣುಗಳು. ನಾಲಿಗೆಯನ್ನು ಮತ್ತೆ ಮತ್ತೆ ಕಾಡುವ ಸವಿರುಚಿ ಈ ಹಣ್ಣುಗಳಿಗೆ.

ಕೆಂಪನೆಯ ಹುಳಿ- ಸಿಹಿ ಮಿಶ್ರಿತ ಸಂಪಗೆಹಣ್ಣೋ ಗಗನ ಚುಂಬಿಸುವ ಮರಗಳಲ್ಲಿ ಬಿಟ್ಟರೂ ಕೆಳಗೆ ಬೀಳುವ ಹಣ್ಣುಗಳೇ ತಿನ್ನಲು ಬಲು ರುಚಿ. ಕಪ್ಪನೆಯ ದ್ರಾಕ್ಷಿಯಂತೆ ಗೊಂಚಲು ಗೊಂಚಲಾಗಿ ಬಿಡುವ ಕೌಳಿ ಹಣ್ಣುಗಳು. ನೇರಳೆ ಹಣ್ಣು ತಿಂದು ತುಟಿಯೆಲ್ಲ ನೀಲಿ ಮಾಡಿಕೊಂಡು ಒಬ್ಬರಿಗೊಬ್ಬರು ನಾಲಿಗೆ ಚಾಚಿ ಅಣಕಿಸುವ ಆಟ. ಈ ನೀಲಿ ಬಣ್ಣದಿಂದ ಮುಕ್ತಿ ಬೇಕೆಂದರೆ ಪಕ್ಕದಲ್ಲಿ ತಲೆ ತಗ್ಗಿಸಿ ನಿಂತ ಸಳ್ಳೆ ಮರದಿಂದ ಹಳದಿ ಮಣಿಗಳಂತಹ ಹಣ್ಣುಗಳನ್ನು ಬಾಯಿಗೆ ಹಾಕಿಕೊಂಡು ಸೀಪಿದರಾಯ್ತು. ಅದರಲ್ಲಿನ ಅಲ್ಪ ಹುಳಿಯ ಅಂಶಕ್ಕೆ ನೀಲಿ ಬಣ್ಣವನ್ನೆಲ್ಲ ಕರಗಿಸಿಬಿಡುವ ಅಗಾಧ ಶಕ್ತಿ. ಅರೆ! ಸಳ್ಳೆಮರದ ಬುಡದಲ್ಲಿ ಕೆಂಪನೆಯ ಹೊಳೆ ದಾಸವಾಳ (ಕೇಪಳ) ಹಣ್ಣಿನ ಗೊಂಚಲನ್ನು ಕಿತ್ತು ಜೇಬಿಗಿಳಿಸದಿದ್ದರೆ ಹೇಗೆ? ಹೆಣ್ಣುಮಕ್ಕಳಾದರೆ ಜೋಡು ಜಡೆಗೆ ಕ್ಲಿಪ್ ಸೇರಿಸಿ ಗೊಂಚಲನ್ನು ಮುಡಿಯುವ ಸಂಭ್ರಮ.



ನೇರಳೆ ಮರದಿಂದ ಅನತಿ ದೂರದಲ್ಲೇ ಮೈ ತುಂಬ ಕಾಯಿ- ಹಣ್ಣುಗಳ ಕಡ್ಡಿ ಹೊತ್ತ ನುರುಕಲ. ಬೆಟ್ಟದ ತುದಿಯಲ್ಲಿ ಮುಳ್ಳಿನ ಕಂಟಿಯಲ್ಲಿ ತೊನೆದು ನಿಂತ ಬಿಳೆ ಮುಳ್ಳು ಹಣ್ಣುಗಳನ್ನು ಕಷ್ಟಪಟ್ಟಾದರೂ ಕಿತ್ತು ಬಾಯೊಳಗೆ ಹಾಕಿಕೊಂಡರೆ ಆಹಾ, ಆ ಸಿಹಿಯಾದ ಹಿಟ್ಟು ಹಿಟ್ಟಾದ ತಿರುಳಿನ ರುಚಿ ಉಳಿಯುವುದು ಎಷ್ಟು ಹೊತ್ತಿನ ತನಕ! ಬೆಟ್ಟದ ಮೇಲೋ ಸಾಲುಸಾಲಾಗಿ ನಿಂತ ಬಿಕ್ಕೆಯ ಗಿಡಗಳಲ್ಲಿ ತೂಗಿ ನಿಂತ ಕಾಯಿಗಳು. ಹಣ್ಣಾಗಲು ಜುಲೈವರೆಗೆ ಕಾಯಬೇಕು. ಆದರೂ ದೋರೆಗಾಯನ್ನು ಅಗಿದು ಒಗರು ರುಚಿಗೆ ಉಗಿದರೇ ಮನಸ್ಸಿಗೆಲ್ಲಾ ಸಂತಸ. ಪಿಳ್ಳೆ ಗಿಡಗಳೂ ಹೂ ಹೊತ್ತು ನಗುತ್ತಿವೆ. ಕಾಯಾಗಿ, ಹಣ್ಣಾಗಲೂ ತಿಂಗಳಾದರೂ ಬೇಕು. ಇರಲಿ, ಅಷ್ಟರಲ್ಲಿ ಉಳಿದ ಹಣ್ಣುಗಳ ಕಾಲ ಮುಗಿದು ಹೋಗಿ ಅದನ್ನೇ ಬಾಯಿತುಂಬ ತುಂಬಿಕೊಂಡು ರಸ ಹೀರಿದರಾಯ್ತು!

ಚಿತ್ರ- ಬರಹ: **ಶ್ರೀಧರ ತುಂಬೇಮನೆ**

